**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

**ದೊಡ್ಡಬಳ್ಳಾಪುರ**

**ಸಿ ಸಿ ನಂ :10/2018**

**ಪಿ ಡಬ್ಲೂ - 9**

**ಸಿ ಡಬ್ಲೂ - 11**

**ದಿಃ 20.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಕೆ. ಮಲ್ಲೇಶ್**

**ತಂದೆಯ ಹೆಸರು ಃ ಕಾಮಣ್ಣ**

**ವಯಸ್ಸು ಃ 45 ವರ್ಷ**

**ಉದ್ಯೋಗ ಃ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ**

**ವಿಳಾಸ ಃ ದೊಡ್ಡಬಳ್ಳಾಪುರ**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ನಾನು 2016 ರಿಂದ 2021 ರವರೆಗೂ ದೊಡ್ಡಬಳ್ಳಾಪುರ ಪಿ.ಡಿ.ಓ. ಕಛೇರಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರರಿಯಾಗಿ ಕರ್ತವ್ಯನಿರ್ವಹಿಸಿರುತ್ತೇನೆ.

ಸಾಕ್ಷಿಯು ನಿಪಿ-12 ರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-12(ಬಿ) ಎಂದು ಗುರುತಿಸಲಾಯಿತು. ನಿಪಿ-12 ದಾಖಲೆಯನ್ನು ನಾನು ದೊಡ್ಡಬೆಳವಂಗಲ ಪೋಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರ ಕೋರಿಕೆಯ ಮೇರೆಗೆ ಚಿಕ್ಕಬೆಳವಂಗಲ ಗ್ರಾಮದ ಶಿವಣ್ಣ, ಮಂಗಳಮ್ಮ ಹಾಗೂ ಜಯಶಂಕರ್ ಇವರುಗಳ ಮನೆಯ ದಾಖಲಾತಿಗಳನ್ನು ಕೋರಿದ್ದು, ಅವುಗಳನ್ನು ಸಲ್ಲಿಸಿ ಕೊಟ್ಟಿರುತ್ತೇನೆ. ಸಾಕ್ಷಿಯು ತಾನು ನೀಡಿದ ಡಿಮ್ಯಾಂಡ್ ರಿಜಿಸ್ಟರ್ ನಿಪಿ-13 ಮತ್ತು 14 ರಲ್ಲಿನ ಸಹಿಗಳನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯಗಳನ್ನು ನಿಪಿ-13(ಬಿ) ಮತ್ತು 14(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಜಿ.ಜಿ. ಆರೋಪಿತರ ಪರ ವಕೀಲರಿಂದ**

ಪೋಲೀಸರು ನನಗೆ ಲಿಖಿತವಾಗಿ ಮನವಿಯನ್ನು ಸಲ್ಲಿಸಿದ್ದರು. ನನಗೆ ಯಾವುದೇ ಮನವಿಯನ್ನು ಪೋಲೀಸರು ನನಗೆ ಸಲ್ಲಿಸಿಲ್ಲ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-13 ಶಿವಣ್ಣ, ಮಂಗಳಮ್ಮ ಹಾಗೂ ಜಯಶಂಕರ್ ರವರಿಗೆ ಸೇರಿದ ದಾಖಲೆಯಲ್ಲ ಎಂದರೆ ಸಾಕ್ಷಿಯು ಅವರ ವಂಶಸ್ಥರ ದಾಖಲೆ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ನಿಪಿ-13 ವಾಸದ ಮನೆಗೆ ಸಂಬಂಧಿಸಿದ್ದ ದಾಖಲೆಯಾಗಿದ್ದು ಅದನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-13 ಮತ್ತು

14 ನ್ನು ಪೋಲೀಸರ ಮಾತು ಕೇಳಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**